# ಭಿಕ್ಷಾಟನೆಯಿಂದ ಬಾಲಿವುಡ್‌ವರೆಗೆ



**ರಾನು ಮೊಂಡಾಲ್ ಎನ್ನುವ ಹಾಡುಹಕ್ಕಿಗೆ ಅನಿರೀಕ್ಷಿತ ಅದೃಷ್ಟ ಒಲಿದಿದೆ. ರೈಲು ನಿಲ್ದಾಣದಲ್ಲಿ ಹೊಟ್ಟೆಪಾಡಿಗಾಗಿ ಹಾಡುತ್ತಿದ್ದ ರಾನು, ಈಗ ಬಾಲಿವುಡ್ ಗಮನಸೆಳೆದಿರುವ ಸಿಂಗರ್!**

**■ ಶಶಿಕುಮಾರ್ ಸಿ.**

ಗಾಯನದಲ್ಲಿ ತಲ್ಲೀನರಾದ ರಾನು ಜೊತೆ ಹಿಮೇಶ್ ರೇಶಮಿಯಾ

ತುತ್ತಿನ ಚೀಲದ ಹಸಿವು ನೀಗಿಸಲು ತನ್ನ ಕಂಠಸಿರಿಯಿಂದ ಹಾಡುತ್ತಾ, ಸಿಕ್ಕಸಿಕ್ಕವರ ಮುಂದೆ ಕೈಯೊಡ್ಡಿ, ಚಾಚಿದ ಕೈಗೆ ಬಿದ್ದಿದ್ದರಿಂದ ಜೀವನ ದೂಡುತ್ತಿದ್ದ ರಾನು ಮೊಂಡಾಲ್ ಎಂಬ 60ರ ಮಹಿಳೆಗೆ ಸಾಮಾಜಿಕ ಜಾಲತಾಣಗಳು ಜಾಕ್‌ಪಾಟ್ ಹೊಡೆಸಿವೆ.

ರಾನು ಪಶ್ಚಿಮಬಂಗಾಳದ ರಣಘಾಟ್‌ನವರು. ಅಲ್ಲಿನ ರೈಲು ನಿಲ್ದಾಣದ ಪ್ಲ್ಯಾಟ್‌ಫಾರಂನಲ್ಲಿ ಭಿಕ್ಷೆಯನ್ನೇ ಹಾಡಾಗಿಸಿಕೊಂಡು ಬೇಡುತ್ತಿದ್ದ ಅವರು, ದಿನಬೆಳಗಾಗುವುದರಲ್ಲಿ 'ಇಂಟರ್ನೆಟ್ ಸ್ಟಾರ್' ಆಗಿ ಬೆಳೆದಿದ್ದಾರೆ. ಅಂತರ್ಜಾಲ ಲೋಕದಲ್ಲಿನ ಹೆಚ್ಚಿನ ಹುಡುಕಾಟವೂ ಈಗ ಅವರ ಬಗ್ಗೆಯೇ.

ಅವರ ಹಾಡಿನ ಮಾಧುರ್ಯಕ್ಕೆ ಮನಸೋತೊ ಏನೋ ವ್ಯಕ್ತಿಯೊಬ್ಬರು ಆಕೆ ಗುನುಗಿಸುತ್ತಿದ್ದ 'ಏಕ್ ಫ್ಯಾರ್ ಕಾ ನಗುಮಾ ಹೈ... ಮೌಜೊಂಕಿ ರವಾನಿ ಹೈ, ಜಿಂಗೀ ಔರ್ ಕುಚ್ ಭೀ ನಹೀ... ತೇರಿ, ಮೇರಿ ಕಹಾನಿ ಹೈ' (ಲತಾ ಮಂಗೇಶ್ವರ್ ಹಾಡಿರುವ) ಹಾಡನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು. ಆ ವಿಡಿಯೊವನ್ನು 'ಬಾರ್ಪೆಟಾ ಟೌನ್ ದಿ ಪ್ಲೇಸ್ ಆಫ್ ಪೀಸ್' ಪೇಜ್ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿತ್ತು. ಅದು ಮತ್ತಷ್ಟು ವೈರಲ್ ಆಯಿತು. ಖ್ಯಾತಿ ಕುಖ್ಯಾತಿ ಗಳಿಕೆಗೆ ಕಾರಣವಾಗುತ್ತಿದ್ದ ಸಾಮಾಜಿಕ ಜಾಲತಾಣಗಳೂ ಸಹ ಅವರ ಸುಮಧುರ ಕಂಠಕ್ಕೆ ಮನಸೋತು ಹಿಂದೆಂದೂ ಕಂಡಿರದ, ಊಹಿಸದ ಖ್ಯಾತಿ ತಂದುಕೊಟ್ಟಿವೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದ ಆ ವಿಡಿಯೊ ಗಮನಿಸಿದ ಹಿಂದಿಯ ಸೋನಿ ವಾಹಿನಿಯು ತನ್ನ 'ಸೂಪರ್‌ಸ್ಟಾರ್ ಸಿಂಗರ್' ಕಾರ್ಯಕ್ರಮದಲ್ಲಿ ಹಾಡಲು ವೇದಿಕೆ ಕಲ್ಪಿಸಿತು. ಆ ಕಾರ್ಯಕ್ರಮದಲ್ಲಿ ನೆರೆದಿದ್ದವರು ಮನಸೂರೆಗೊಳ್ಳುವಂತೆ ಹಾಡಿ ಮಾತನಾಡಿದ ರಾನು, 'ಬಿಸ್ಕೆಟ್, ಊಟ ಹಾಗೂ ಕಾಸಿಗಾಗಿ ಬೇಡುತ್ತಾ ಹಾಡುತ್ತಿದ್ದೆ' ಎಂದು ಹೇಳುವುದರ ಜೊತೆಗೆ – 'ನನಗೆ ಖುಷಿಯಾಗಿದೆ, ಹೊಸ ಬದುಕು ದೊರಕಿದೆ. ಹೀಗಾಗಿ ಇದನ್ನು ಹಾಳು ಮಾಡಿಕೊಳ್ಳುವುದಿಲ್ಲ. ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳುತ್ತೇನೆ' ಎಂದಿದ್ದಾರೆ.

ಆ ಕಾರ್ಯಕ್ರಮದ ತೀರ್ಪುಗಾರರಾಗಿರುವ ಹಿನ್ನೆಲೆ ಗಾಯಕ ಹಿಮೇಶ್ ರೇಶಮಿಯಾ, ರೈಲು ನಿಲ್ದಾಣದಲ್ಲಿ ಹಾಡುತ್ತಿದ್ದ ರಾನು ಮೊಂಡಾಲ್ ಅವರನ್ನು ನೇರವಾಗಿ ತಮ್ಮ ರೆಕಾರ್ಡಿಂಗ್ ಸ್ಟುಡಿಯೊಗೆ ಆಹ್ವಾನಿಸಿ, ತಮ್ಮ ಮುಂಬರುವ 'ಹ್ಯಾಪಿ ಹಾರ್ಡಿ ಮತ್ತು ಹೀರ್' ಚಿತ್ರದಲ್ಲಿ ಹಾಡು ಹಾಡಲು ಅವಕಾಶ ನೀಡಿದ್ದಾರೆ. ಆ ಸಿನಿಮಾದಲ್ಲಿ 'ತೇರಿ ಮೇರಿ ಕಹಾನಿ' ಹಾಡಿಗೆ ಧ್ವನಿ ನೀಡಿದ್ದಾರೆ. ಹಾಡಿದ್ದಕ್ಕಾಗಿ ಸುಮಾರು ₹7 ಲಕ್ಷ ಸಂಭಾವನೆ ನೀಡಿದ್ದಾರೆ. ಆ ಹಾಡಿನ ರೆಕಾರ್ಡಿಂಗ್ ವಿಡಿಯೊವನ್ನೂ ಹಿಮೇಶ್ ತನ್ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

## ಸಲ್ಮಾನ್ ಖಾನ್ ನೆರವು?

ಸದ್ಯ ರಾನು ಮೊಂಡಾಲ್‌ಗೆ ಬಾಲಿವುಡ್‌ನಲ್ಲಿ ಅವಕಾಶಗಳು ಹರಿದುಬರುತ್ತಿವೆ. ಅವರ ಹಾಡನ್ನು ಕೇಳಿ ನಟ ಸಲ್ಮಾನ್ ಖಾನ್ ಸಹ ಭಾವುಕರಾದ ವಿಡಿಯೊ ವೈರಲ್ ಆಗಿದೆ.

ರಾನು ಅಭಿಮಾನಿಯಾಗಿರುವ ಸಲ್ಮಾನ್, ₹ 55 ಲಕ್ಷ ಮೌಲ್ಯದ ಮನೆ ಕೊಡಿಸಿದ್ದಾರೆ ಎನ್ನುವ ಸುದ್ದಿ ಬಾಲಿವುಡ್ ಅಂಗಳದಲ್ಲಿ ಕೇಳಿಬರುತ್ತಿದೆ. ಮನೆಯ ಜೊತೆಗೆ ತಮ್ಮ ಮುಂದಿನ ಸಿನಿಮಾ 'ದಬಾಂಗ್3' ಸಿನಿಮಾಗೆ ಹಾಡಲು ಅವಕಾಶ ನೀಡುವ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

## ತಾಯಿ-ಮಗಳು ಒಂದಾದರು!



ಪಶ್ಚಿಮಬಂಗಾಳದ ಕೃಷ್ಣಾನಗರ ಬಳಿಯ ನಾಡಿಯಾದಲ್ಲಿ ಹುಟ್ಟಿದ ರಾನು ಮೊಂಡಾಲ್, ತನ್ನ ತಾಯಿ ನಿಧನರಾದ ಬಳಿಕ ಬಾಲ್ಯಜೀವನವನ್ನು ರಣಘಾಟ್‌ನ ಸಂಬಂಧಿ ಮನೆಯಲ್ಲಿ ಕಳೆದರು. ರಾನು ರಾಯ್ ಹೆಸರಿನಲ್ಲಿ ರಣಘಾಟ್‌ನಲ್ಲಿ ಅವರಿಗೆ ಮತದಾರರ ಗುರುತಿನ ಚೀಟಿ ನೀಡಲಾಗಿದೆ.

ಆದರೆ, ಸುಮಾರು ಹತ್ತು ವರ್ಷಗಳ ಹಿಂದೆ ತನ್ನ ಮಗಳು ಸ್ವಾತಿಯಿಂದ ಆಕಸ್ಮಿಕವಾಗಿ ರಾನು ದೂರವಾಗಿದ್ದರು. ಹಿಮೇಶ್ ರೇಶಮಿಯಾ ಹಂಚಿಕೊಂಡಿರುವ ವಿಡಿಯೊ ಹೆಚ್ಚು ವೈರಲ್ ಆಗುತ್ತಿದ್ದಂತೆ ನಾಪತ್ತೆಯಾಗಿದ್ದ ತಾಯಿಯನ್ನು ಹುಡುಕಿಕೊಂಡು ಮಗಳು ಸ್ವಾತಿ ಬಂದಿದ್ದಾರೆ ಎಂದು 'ಇಂಡಿಯಾ ಟುಡೇ'ಯು ವರದಿ ಮಾಡಿದೆ. ಖ್ಯಾತಿ ಗಳಿಸಿದ ಬಳಿಕ ಮಗಳಿಗೆ ತಾಯಿಯ ನೆನಪಾಯ್ತಾ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಹಾಡಿನ ವೀಕ್ಷಣೆಗೆ bit.ly/2Ho08pr ಕೊಂಡಿ / ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.